ಸಾಕ್ಷಿಯನ್ನು ದಿಃ **20.09.2023** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಸಿ. ಆರ್. ವಕೀಲ**ರಿಂದ**

ನಮ್ಮ ತಂದೆ ಬಾಯಿ ಮಾತಿನಲ್ಲಿ ಯಾರು ಯಾರು ಯಾವ ಯಾವ ಜಮೀನಿನಂ ಸ್ವಾಧೀನದಲ್ಲಿರಬೇಕು ಎಂದು ಹೇಳಿದ್ದರೋ ಅದೇ ರೀತಿ ನಾವುಗಳು ಸದರಿ ಜಮೀನುಗಳ ಅನುಭವದಲ್ಲಿ ಇದ್ದೇವೆ ಎಂದರೆ ಸರಿ ಎಂದು ನುಡಿದು, ಅಷ್ಟೊಂದು ಜಮೀನುಗಳಲ್ಲಿ ಇಲ್ಲ ಎಂದು ಹೇಳುತ್ತಾರೆ. ನಮ್ಮ ತಂದೆ ಬಾಯಿ ಮಾತಿನಲ್ಲಿ ಹಿಸ್ಸೆ ಮಾಡಿಕೊಟ್ಟ ಜಮೀನುಗಳಲ್ಲಿ ನಾನು ಮತ್ತು 2 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದುಕೊಂಡು ಅಭಿವೃದ್ಧಿ ಪಡೆಸಿಕೊಂಡು ಹೋಗುತ್ತಿದ್ದೇವೆ ಎಂದರೆ ಸುಳ್ಳು. ನಮ್ಮ ತಂದೆ ಹಿಸ್ಸೆ ಮಾಡಿಕೊಟ್ಟಿರುವ ಜಮೀನಿನಲ್ಲಿ ಪ್ರತಿವಾದಿ ತೆಂಗು, ಅಡಿಕೆ, ಬಾಳೆ ಇತ್ಯಾದಿ ಬೆಳೆಗಳನ್ನು ಇಟ್ಟು ಅಭಿವೃದ್ಧಿ ಮಾಡಿದ್ದಾರೆ ಎಂದರೆ ಸುಳ್ಳು. 2 ನೇ ಪ್ರತಿವಾದಿ ತಮ್ಮ ಪ್ರತಿವಾದ ಪತ್ರದಲ್ಲಿ ಏನೇನು ವಿಚಾರಗಳನ್ನು ಬರೆಸಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಸ್ವಲ್ಪ ಮಟ್ಟಿಗೆ ನೆನಪಿದೆ. ನಮ್ಮ ತಂದೆ ತಮ್ಮ ಜೀವಿತಾವಧಿಯಲ್ಲಿ ಅವರು ಬಾಯಿ ಮಾತಿನಲ್ಲಿ ಹಂಚಿಕೆ ಮಾಡಿಕೊಟ್ಟಿದ್ದ ಪ್ರಕಾರ ನೊಂದಾಯಿತ ವಿಭಾಗ ಪತ್ರ ಮಾಡಿಕೊಳ್ಳಿ ಎಂದು ತಿಳಿಸಿದಾಗ ನಾನು ತಕರಾರು ಮಾಡಿದ್ದೆ ಎಂದರೆ ಸುಳ್ಳು. ಈ ರೀತಿ ನಾನು ತಕರಾರು ಮಾಡಿದಾಗ ನಮ್ಮ ತಂದೆಯು ಅವರ ಸ್ನೇಹಿತರಾದ ಕೆಂಪಬೋರೆಗೌಡರ ಮಗ ಬೋರೇಗೌಡ, ಮಾಲನಾಯಕರ ಮಗ ರಾಮನಾಯಕರವರ ಸಮಕ್ಷಮ ನಮ್ಮಗಳಿಗೆ ಬಾಯಿ ಮಾತಿನ ಮೂಲಕ ಹಂಚಿಕೆ ಮಾಡಿಕೊಟ್ಟಿದ್ದ ದಾವಾ ಜಮೀನುಗಳ ಬಗ್ಗೆ ದಿನಾಂಕ 24.04.2013 ರಂದು ನೊಂದಾಯಿತ ಮರಣ ಶಾಸನ ಮಾಡಿಸಿಟ್ಟರು ಎಂದರೆ ಸುಳ್ಳು.

ನಮ್ಮ ತಂದೆ ದಿನಾಂಕ 30.11.2013 ರಂದು ಮರಣ ಹೊಂದಿದ್ದಾರೆ. ನಮ್ಮ ತಂದೆಯ ಮರಣಾ ನಂತರ ಮೇಲೆ ಹೇಳಿದಂತಹ ರಾಮನಾಯಕ ಮತ್ತು ಬೋರೇಗೌಡರು ನಮ್ಮ ಮನೆಗೆ ಬಂದು ಮೇಲ್ಕಂಡಂತೆ ನಮ್ಮ ತಂದೆ ಬರೆದಿಟ್ಟಿದ್ದ ಮರಣ ಶಾಸನದ ವಿಚಾರವನ್ನು ತಿಳಿಸಿದರು ಎಂದರೆ ಸುಳ್ಳು. ವಿಲ್

ವಿಚಾರ ಗಮನಕ್ಕೆ ಬಂದ ನಂತರ ನಾನು ಮತ್ತು 2 ನೇ ಪ್ರತಿವಾದಿ ನಮ್ಮ ನಮ್ಮ ಪಾಲಿಗೆ ಬಂದಿದ್ದ ಸ್ವತ್ತುಗಳ ಖಾತೆ ಬದಲಾವಣೆಗಾಗಿ ಸಂಬಂಧಪಟ್ಟ ಕಚೇರಿಗೆ ಅರ್ಜಿಗಳನ್ನು ಕೊಟ್ಟೆವು ಎಂದರೆ ಸುಳ್ಳು. ಸದರಿ ಮರಣ ಶಾಸನದ ಪ್ರಕಾರ ನನ್ನ ಹಿಸ್ಸೆಗೆ ದೈತ್ಯನಕೆರೆ ಕಾವಲು ಗ್ರಾಮದ ಸರ್ವೇ ನಂ. 1/16 ಬಿ ವಿಸ್ತೀರ್ಣ 5 ಎಕರೆ 6 ಗುಂಟೆ, ಸರ್ವೇ ನಂ. 1/17, 1/19 ಮತ್ತು 1/20 ರ ವಿಸ್ತೀರ್ಣ 4 ಎಕರೆ 37 ಗುಂಟೆ ಜಮೀನುಗಳು ಮತ್ತು ಹಸವಾಳು ಗ್ರಾಮದ ಸರ್ವೇ ನಂ. 20/1 ವಿಸ್ತೀರ್ಣ 5 ಗುಂಟೆ, ಸರ್ವೇ ನಂ. 74/1 ವಿಸ್ತೀರ್ಣ 16 ಗುಂಟೆ, ಸರ್ವೇ ನಂ. 73/2 ವಿಸ್ತೀರ್ಣ 10 ಗುಂಟೆ, ಸರ್ವೇ ನಂ. 73/4 ವಿಸ್ತೀರ್ಣ 9 ಗುಂಟೆ, ಸರ್ವೇ ನಂ. 73/7 ವಿಸ್ತೀರ್ಣ 4 ಗುಂಟೆ, ಸರ್ವೇ ನಂ. 73/5 ವಿಸ್ತೀರ್ಣ 5 ಗುಂಟೆ ಮತ್ತು 20x60 ಅಡಿ ಅಳತೆಯ ಖಾಲಿ ನಿವೇಶನ ಇವಿಷ್ಟು ಸ್ವತ್ತುಗಳು ಬಂದಿವೆ ಮತ್ತು ಎಂಆರ್ ಹೆಚ್ 2/2014-15 ರ ಪ್ರಕಾರ ಇವುಗಳ ಖಾತೆ ಕೂಡ ನನ್ನ ಹೆಸರಿಗೆ ಬದಲಾವಣೆ ಆಗಿದೆ ಎಂದರೆ ಸಾಕ್ಷಿ ನಮ್ಮ ತಂದೆ ಖುಷಾರು ತಪ್ಪಿದ್ದಾಗ ಅದನ್ನು ದುರುಪಯೋಗ ಪಡಿಸಿಕೊಂಡು ಇವನ್ನೆಲ್ಲ ಸೃಷ್ಟಿ ಮಾಡಿದ್ದಾರೆ ಎನ್ನುತ್ತಾರೆ. ನಮ್ಮ ತಂದೆಯ ಮಾನಸಿಕ ಸ್ಥಿತಿ ಚೆನ್ನಾಗಿರುವಾಗಲೇ ತಮ್ಮ ಸ್ನೇಹಿತರಾದ ಬೊರೇಗೌಡರು ಹಾಗೂ ರಾಮನಾಯಕರ ಸಮಕ್ಷಮ ಈ ವಿಲ್ ಬರೆಸಿ ಇಟ್ಟಿದ್ದರು ಎಂದರೆ ಸುಳ್ಳು.

ಈ ರೀತಿ ವಿಲ್‌ನ್ನು ಸೃಷ್ಟನೆ ಮಾಡಿದ್ದಾರೆ ಎಂದು ನಾನು ಹೇಳವುತ್ತಿದ್ದು, ಇದನ್ನು ಪ್ರಶ್ನಿಸಿ ಯಾವುದೇ ಪ್ರಾಧಿಕಾರದ ಮುಂದೆ ನಾನು ಮೇಲ್ಮನವಿ ಸಲ್ಲಿಸಿಲ್ಲ, ಪ್ರಸ್ತುತ ದಾವೆಯೆ ನಡೆಯುತ್ತಿದೆಯಲ್ಲಾ ಎನ್ನುತ್ತಾರೆ. ಈ ದಾವೆಯನ್ನು 2016 ನೇ ಸಾಲಿನಲ್ಲಿ ನಾನು ಮತ್ತು ವಾದಿ ಶಾಮೀಲಾಗಿ ಸಲ್ಲಿಸಿದ್ದೇವೆ ಎಂದರೆ ಸುಳ್ಳು. ಈ ದಾವೆ ದಾಖಲಾಗುವ 2 ವರ್ಷ ಪೂರ್ವದಲ್ಲೆ ಈ ಮೇಲ್ಕಂಡ ಸ್ವತ್ತುಗಳ ಖಾತೆ ನನ್ನ ಹೆಸರಿಗೆ ದಾಖಲ್ ಆಗಿದೆ ಎಂದರೆ ಸೃಷ್ಟನೆಯ ವಿಲ್ ಆಧಾರದ ಮೇಲೆ ಬದಲಾವಣೆ ಆಗಿದೆ. ಈ ದಾವೆ ಹಾಕುವ ಪೂರ್ವದಲ್ಲಿ ಖಾತೆ ಆಗಿದ್ದು, ಅದನ್ನು ಆ ಸಂದರ್ಭದಲ್ಲೆ ಪ್ರಶ್ನೆ ಮಾಡಲು ನನಗೇನಾದರೂ ತೊಂದರೆ ಇತ್ತಾ ಎಂದರೆ ಆ ಬಗ್ಗೆ ಕ್ರಮ ಕೈಗೊಳ್ಳಬೇಕು ಎನ್ನುವಷ್ಟರಲ್ಲಿ ಈ ದಾವೆ ಸಲ್ಲಿಸಲಾಗಿದೆ. ಈ ರೀತಿ ನನ್ನ ಹೆಸರಿಗೆ ಮೇಲ್ಕಂಡಂತೆ ಖಾತೆ ಆದ ಜಮೀನುಗಳ ಆಧಾರದ ಮೇಲೆ ನಾನು ಧರ್ಮಾಪುರಿ

ವಿ.ಎಸ್.ಎಸ್.ಎನ್. ಸೊಸೈಟಿಯಲ್ಲಿ ಸಾಲವನ್ನು ಕೂಡ ಪಡೆದುಕೊಂಡೆ ಎಂದರೆ ಸರಿ. ನನಗೆ ಜಮೀನು ಹಿಸ್ಸೆ ಆದ ವಿಚಾರ ಹಾಗೂ ಖಾತೆ ನನ್ನ ಹೆಸರಿಗೆ ಬದಲಾವಣೆ ಆದ ವಿಚಾರ ಎಲ್ಲವೂ ತಿಳಿದಿದ್ದರೂ ಕೂಡ ಅವೆಲ್ಲ ಸೃಷ್ಟನೆಯವು ಎಂದು ನಾನು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ತಂದೆ ಮರಣ ಹೊಂದಿದ ಸಮಯದಲ್ಲಿ ನಾನು ಮತ್ತು 2 ನೇ ಪ್ರತಿವಾದಿ ಚೆನ್ನಾಗಿದ್ದೆವು ಎಂದರೆ ಸರಿ. ಈ ರೀತಿ ನಾನು ಮತ್ತು 2 ನೇ ಪ್ರತಿವಾದಿ ಚೆನ್ನಾಗಿದ್ದಾಗಲೇ ನಾವಿಬ್ಬರೂ ಮಾತನಾಡಿ ಕೊಂಡು ಖಾತೆ ವರ್ಗಾವಣೆಗಾಗಿ ಅರ್ಜಿ ಕೊಟ್ಟಿದ್ದೆವು ಎಂದರೆ ಸುಳ್ಳು. ಸದರಿ ವಿಲ್ ರೀತ್ಯಾ 2 ನೇ ಪ್ರತಿವಾದಿ ಹಿಸ್ಸೆಗೆ ದೈತ್ಯನಕೆರೆ ಕಾವಲು ಗ್ರಾಮದ ಸರ್ವೇ ನಂ. 1/17, 1/19, 1/20 ರ ವಿಸ್ತೀರ್ಣ 6-06 ಎಕರೆ ಮತ್ತು ಅನ್ನರಾಯಪುರ ಗ್ರಾಮದ ಸರ್ವೇ ನಂ. 60/ಬಿ-78 ರ ವಿಸ್ತೀರ್ಣ 36 ಗುಂಟೆ ಹಸವಾಳು ಗ್ರಾಮದ ಸರ್ವೇ ನಂ. 20/1 ರ ವಿಸ್ತೀರ್ಣ 5 ಗುಂಟೆ, ಸರ್ವೇ ನಂ. 21/1 ರ ವಿಸ್ತೀರ್ಣ 15 ಗುಂಟೆ, ಸರ್ವೇ ನಂ. 71/6 ರ ವಿಸ್ತೀರ್ಣ 16 ಗುಂಟೆ, ಸರ್ವೇ ನಂ. 73/3 ರ ವಿಸ್ತೀರ್ಣ 9 ಗುಂಟೆ, ಸರ್ವೇ ನಂ. 73/6 ರ ವಿಸ್ತೀರ್ಣ 4 ಗುಂಟೆ, ಸರ್ವೇ ನಂ. 73/8 ರ ವಿಸ್ತೀರ್ಣ 4 ಗುಂಟೆ ಈ ಜಮೀನುಗಳು ಹೋಗಿ ಅವರ ಹೆಸರಿಗೆ ಎಂ.ಆರ್.ಹೆಚ್ 2/2014-15 ರಂತೆ ಖಾತೆ ಆಗಿದೆ ಎಂದರೆ, ವಿಲ್ಲ ಸೃಷ್ಟಿ ಮಾಡಿಕೊಂಡು ಖಾತೆ ಮಾಡಿಸಿಕೊಂಡಿದ್ದಾರೆ.

ನಮ್ಮ ತಂದೆ ಬಾಯಿ ಮಾತಿನಲ್ಲಿ ಹಿಸ್ಸೆ ಮಾಡಿಕೊಟ್ಟ ರೀತ್ಯವೆ ಮರಣ ಶಾಸನ ಬರೆಸಿಟ್ಟು ಅದರ ಮೇರೆಗೆ ನಮ್ಮಗಳ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿಯಲ್ಲ. ಸದರಿ ಹಿಸ್ಸೆಯಾದ ನಂತರ 2 ನೇ ಪ್ರತಿವಾದಿಯು ತಮ್ಮ ಹಿಸ್ಸೆಗೆ ಸೇರಿದ ಜಮೀನುಗಳಲ್ಲಿ ತೆಂಗು, ಬಾಳೆ, ಅಡಿಕೆ ಇತರೆ ಬೆಲೆ ಬಾಳುವ ಮರಗಳನ್ನು ಬೆಳೆಸಿದ್ದಾರೆ ಎಂದರೆ, ನಮ್ಮ ತಂದೆ ಕಾಲದಲ್ಲೆ ನಾವೆಲ್ಲ ಒಟ್ಟು ಕುಟುಂಬದಲ್ಲಿದ್ದಾಗ ನಮ್ಮ ತಂದೆ ಜೊತೆ ಕೂಡಿ ನಾನೇ ಬೆಳೆಸಿದ್ದೆ. 2 ನೇ ಪ್ರತಿವಾದಿ ಹಿಸ್ಸಾ ಜಮೀನುಗಳಲ್ಲಿ ಅವರು ಹಾಕಿರುವ ಮರಗಳಲ್ಲಿ ಈಗ ಬೆಳೆ ಬಂದಿದೆ ಎಂದರೆ ಅವನ್ನೆಲ್ಲಾ ನಾನೇ ಬೆಳೆಸಿದ್ದೆ. 2 ನೇ ಪ್ರತಿವಾದಿ ಬೆಳೆಸಿರುವ ತೋಟ

ಮತ್ತು ಮರಗಳ ಮೇಲೆ ನನಗೆ ಮತ್ತು ವಾದಿಗೆ ವ್ಯಾಮೋಹ ಬಂದು, 2 ನೇ ಪ್ರತಿವಾದಿಯನ್ನು ಮುಗಿಸಬೇಕು ಎಂಬ ದುರುದ್ದೇಶದಿಂದ ನಾನು ಮತ್ತು ವಾದಿ ಶಾಮಿಲಾಗಿ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಐಟಂ ನಂಬರ 4 ರಲ್ಲಿ 2 ಎಕರೆ ಜಮೀನು ಇದೆ. ಸದರಿ 2 ಎಕರೆ ಜಮೀನು ನನ್ನ ಸೋದರ ಮಾವ ಟಿ.ದಾಸೇಗೌಡ ಹಾಗೂ ನನ್ನ ಚಿಕ್ಕಮ್ಮ ಪುಟ್ಟಲಕ್ಷ್ಮಮ್ಮನವರ ಸ್ವಾಧೀನದಲ್ಲಿ ಇದೆ ಎಂದರೆ ಸರಿ. ಸದರಿ ದಾವಾ ಐಟಂ ನಂಬರ 4, ಸರ್ವೇ ನಂ. 60/77 ಎಂದು ಇದ್ದದ್ದನ್ನು ಒಟ್ಟುಗೂಡಿಸಿ ಹಾಲಿ ಸರ್ವೇ ನಂ. 60/ಪಿ ಎಂದು ಬದಲಾವಣೆ ಆಗಿದೆ ಎಂದರೆ ಸರಿ. ಸದರಿ ಸರ್ವೇ ನಂ. 60/ಪಿ ನ 1 ಎಕರೆ ಜಮೀನಿನಲ್ಲಿ ಸದರಿ ದಾಸೇಗೌಡರು ತೆಂಗಿನ ತೋಟದಲ್ಲಿ ಅರಿಷಿಣದ ಬೆಳೆಯನ್ನು ಇಟ್ಟಿದ್ದಾರೆ ಎಂದು ಸಾಕ್ಷಿಗೆ ಎರಡು ಛಾಯಾಚಿತ್ರಗಳನ್ನು ತೋರಿಸಿದಾಗ ಮೊದಲು ಸರಿ ಎಂದು ನುಡಿದು ಅವರ ಪರ ವಕೀಲರು ಸಿಡಿ ಇಲ್ಲದೇ ಫೋಟೋ ಗುರುತಿಸಲು ಬರುವುದಿಲ್ಲ ಎಂದು ತಕರಾರು ಮಾಡಿದ ನಂತರ ಸಾಕ್ಷಿಯು ಈ ಭಾವಚಿತ್ರದಲ್ಲಿ ಕಾಣುತ್ತಿರುವುದು ದಾಸೇಗೌಡರ ಜಮೀನೇ ಹೌದು ಆದರೆ ಅದು ಸರ್ವೇ ನಂ. 65/ಪಿ ಅಲ್ಲ ಇದು ಬೇರೆ ಕಡೆ ಇದೆ ಫೋಟೋ ನೋಡಿ ಸರಿಯಾಗಿ ಗುರುತಿಸಲು ಆಗುವುದಿಲ್ಲ ಎನ್ನುತ್ತಾರೆ. 2 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಈ ಎರಡು ಫೋಟೋಗಳನ್ನು ನಿಡಿ-23 ಮತ್ತು 24 ಎಂದು ಗುರುತಿಸಲಾಯಿತು.

ಸದರಿ ಸರ್ವೇ ನಂ. 60/ಪಿ ನ ಉಳಿಕೆ ಇನ್ನೊಂದು ಎಕರೆ ಜಮೀನಿನಲ್ಲಿ ನನ್ನ ಚಿಕ್ಕಮ್ಮ ಎಂದು ಹೇಳಿದ ಪುಟ್ಟಲಕ್ಷ್ಮಮ್ಮನವರು ಈಗ ನನಗೆ ತೋರಿಸಿದ ಭಾವಚಿತ್ರದಲ್ಲಿ ಕಂಡಂತೆ ಬಾಳೆ ಬೆಳೆ ಮತ್ತು ಅರಿಷಿಣದ ಬೆಳೆಯನ್ನು ಇಟ್ಟಿದ್ದಾರೆ ಎಂದರೆ ಸಾಕ್ಷಿ ಛಾಯಾಚಿತ್ರ ನೋಡಿ ಹೇಳಲು ನನಗೆ ಸಾಧ್ಯವಿಲ್ಲ, ಅಲ್ಲಿ ಕಾಣುತ್ತಿರುವವರು ನನ್ನ ಚಿಕ್ಕಮ್ಮ ಎಂದು ಕೂಡ ನನಗೆ ಗೊತ್ತಾಗುತ್ತಿಲ್ಲ, ಆದರೆ ಅವರಿಗೆ ನೀಡಿದ 1 ಎಕರೆ ಜಮೀನಿನಲ್ಲಿ ಅವರು ವ್ಯವಸಾಯ ಮಾಡುತ್ತಿರುವುದು ನಿಜ ಎಂದು ಹೇಳುತ್ತಾರೆ.

ನನ್ನ ತಂದೆ ಕೆಂಪೆಗೌಡ ಹಾಗೂ ನನ್ನ ಸೋದರಮಾರ ಟಿ.ದಾಸೇಗೌಡರ ನಡುವೆ ಇದೇ ಹುಣಸೂರು ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ.ಸಿ., ನ್ಯಾಯಾಲಯದಲ್ಲಿ ಓ.ಎಸ್.ನಂಬರ 260/1986 ರಂತೆ ದಾವೆ ನಡೆದಿತ್ತು ಎಂದರೆ ಸರಿ. ನಮ್ಮ ತಂದೆಯು ನಮ್ಮ ಮಾವನ ವಿರುದ್ಧ ಸದರಿ ದಾವೆಯನ್ನು ತಮ್ಮ ಹಕ್ಕು ಘೋಷಣೆ ಕೋರಿ ಸಲ್ಲಿಸಿದ್ದರು ಎಂದರೆ ಹಕ್ಕು ಘೋಷಣೆ ಎಂದರೆ ನನಗೆ ಗೊತ್ತಾಗುವುದಿಲ್ಲ, ಆದರೆ ನಮ್ಮ ತಾಯಿ ಮನೆಯ ಆಸ್ತಿಯನ್ನು ನನ್ನ ಸೋದರಮಾವ ನನ್ನ ತಂದೆಗೆ ನ್ಯಾಯಾಲಯದ ಆದೇಶದ ಮೂಲಕ ಬರೆದುಕೊಟ್ಟು ಖಾತೆ ಆಗಿದೆ. ಸದರಿ ಓ.ಎಸ್.260/1986 ರ ದಾವೆ ಸಲ್ಲಿಸಿದಾಗ ನಮ್ಮ ತಾಯಿ ಜೀವಂತ ಇದ್ದರು ಎಂದರೆ ಸರಿ. ನಮ್ಮ ತಾಯಿ ಜೀವಂತ ಇದ್ದಾಗ ನಮ್ಮ ತಾಯಿ ಮನೆ ಆಸ್ತಿಯಲ್ಲಿ ಭಾಗ ಕೇಳಲು ನಮ್ಮ ತಂದೆಗೆ ಯಾವುದೇ ಹಕ್ಕು, ಅಧಿಕಾರ ಇಲ್ಲ ಎಂದರೆ ಅದೆಲ್ಲ ನನಗೆ ಗೊತ್ತಾಗುವುದಿಲ್ಲ, ಆದರೆ ನಮ್ಮ ಸೋದರಮಾವ ನಮ್ಮ ತಂದೆ ಹೆಸರಿಗೆ ಬರೆದುಕೊಟ್ಟಿದ್ದರು. ಓ.ಎಸ್.260/1986 ರ ದಾವೆಯಲ್ಲಿ ಕಾಣಿಸಿರುವ ಸ್ವತ್ತು ನಮ್ಮ ತಾಯಿ ಮನೆಯ ಸ್ವತ್ತುಗಳಾಗಿವೆ ಎಂದರೆ ಸರಿ.

ಸದರಿ ಓ.ಎಸ್.260/1986 ರಲ್ಲಿ ಕಾಣಿಸಿರುವ ಸ್ವತ್ತುಗಳನ್ನು ನನ್ನ ತಂದೆ ಅವರ ತಮ್ಮಂದಿರಿಗೆ ತಿಳಿಯದಂತೆ ಬೇನಾಮಿಯಾಗಿ ಖರೀದಿಸಿ ನನ್ನ ಸೋದರಮಾವನ ಹೆಸರಿಗೆ ನೊಂದಣಿ ಮಾಡಿಸಿದ್ದರು ಎಂದರೆ ಸುಳ್ಳು. ಈ ರೀತಿ ಸದರಿ ದಾವೆಯ ಎರಡೂ ಐಟಂ ಸ್ವತ್ತುಗಳ ಒಟ್ಟು 13 ಎಕರೆ 34 ಗುಂಟೆ ಜಮೀನನ್ನು ವಾಪಸ್ ಬರೆದುಕೊಡಲು ನಮ್ಮ ತಂದೆ ನನ್ನ ಸೋದರಮಾವನನ್ನು ಕೇಳಿದಾಗ ಅವರು ನಿರಾಕರಿಸಿದ ಕಾರಣ ನಮ್ಮ ತಂದೆ ಓ.ಎಸ್.260/1986 ರ ದಾವೆಯನ್ನು ಸದರಿ ಸ್ವತ್ತಿನ ಮೇಲೆ ಹಕ್ಕು ಮತ್ತು ಮಾಲೀಕತ್ವ ಘೋಷಣೆ ಕೋರಿ ಹೂಡಿದ್ದರು ಎಂದರೆ ಸುಳ್ಳು . ಸದರಿ ದಾವೆಯು ನಮ್ಮ ತಂದೆ ಕೋರಿದಂತೆ ಅವರಿ ಹೆಸರಿಗೆ ಡಿಕ್ರಿ ಆಯಿತು ಎಂದರೆ ಸರಿ, ಆ ಪ್ರಕಾರವೇ ಖಾತೆ ಕೂಡ ಆಯಿತು ಎನ್ನುತ್ತಾರೆ. ವಕೀಲರ ಕೋರಿಕೆ ಮೇರೆಗೆ ಮತ್ತು ಸಾಕ್ಷಿಯು ಸದರಿ ಓ.ಎಸ್.260/1986 ರ ತೀರ್ಪು ತುತ್ತು ಡಿಕ್ರಿಯನ್ನು ಒಪ್ಪಿಕೊಂಡ ಕಾರಣ ಅದನ್ನು ಒಟ್ಟಾಗಿ ನಿಡಿ-25 ಎಂದು ಗುರುತಿಸಲಾಯಿತು. ಅದೇ

ರೀತಿ ಸರ್ವೆ ನಂ. 60/ಪಿ–ನ 2 ಎಕರೆ ಸ್ವತ್ತಿನ ಪಹಣಿ ಪತ್ರಿಕೆಯನ್ನು ಕೂಡ ನಿಡಿ–26 ಎಂದು ಗುರುತಿಸಲಾಯಿತು. ಓ.ಎಸ್.ನಂಬರ 260/1986 ರಲ್ಲಿ ಕಾಣಿಸಿರುವ ಸ್ವತ್ತುಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ, ಅದು ನನ್ನ ತಾಯಿಯ ತಂದೆ ಮನೆಯ ಆಸ್ತಿಯಾಗಿವೆ. ಅದು ನನ್ನ ತಾಯಿಯ ತಂದೆಯ ಮನೆ ಆಸ್ತಿಯಾಗಿವೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ನಮ್ಮ ಸೋದರ ಮಾವ ನಮ್ಮ ತಂದೆಗೆ ಬರೆದುಕೊಟ್ಟಿರುವುದೇ ಸಾಕ್ಷಿಯಾಗಿದೆ. ಇದು ತಾಯಿಯ ತವರು ಮನೆ ಆಸ್ತಿಯಲ್ಲ, ಇದು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನುಡಿಯುತ್ತಾರೆ ಸದರಿ ಓ.ಎಸ್.ನಂಬರ 260/1986 ರಲ್ಲಿ ಕಾಣಿಸಿರುವ ಸ್ವತ್ತುಗಳು ನನ್ನ ಸೋದರ ಮಾವನಿಗೆ ಕ್ರಯವಾಗಿತ್ತು, ಅವರ ಹೆಸರಿನಿಂದ ನಮ್ಮ ತಂದೆ ಹೆಸರಿಗೆ ನ್ಯಾಯಾಲಯದ ಆದೇಶದ ಮೇರೆಗೆ ಖಾತೆ ಆಗಿದೆ.

ದಾವಾ ಸ್ವತ್ತುಗಳೆಲ್ಲವೂ ನನ್ನ ತಂದೆಯ ಸ್ವಯಾರ್ಜಿತ ಸ್ವತ್ತುಗಳಾಗಿದ್ದು, ಅವುಗಳನ್ನು ನಮ್ಮ ತಂದೆ ಮರಣ ಹೊಂದುವ 10 ವರ್ಷ ಪೂರ್ವದಲ್ಲೆ ಬಾಯಿ ಮಾತಿನ ಮೂಲಕ ನನಗೆ ಮತ್ತು 2 ನೇ ಪ್ರತಿವಾದಿಗೆ ಹಂಚಿಕೆ ಮಾಡಿಕೊಟ್ಟಿರುವ ಮೇರೆಗೆ ದಿನಾಂಕ 24.04.2013 ರಂದು ನೊಂದಾಯಿತ ಮರಣ ಶಾಸನವನ್ನು ಬರೆಯಿಸಿ, ಅದರ ರೀತ್ಯಾ ನಮ್ಮ ನಮ್ಮ ಹೆಸರಿಗೆ ಖಾತೆ ಬದಲಾವಣೆ ಆಗಿದೆ ಎಂದರೆ, ಸಾಕ್ಷಿ ದಾವಾ ಸ್ವತ್ತಿನ ಪೈಕಿ ಒಂದೇ ಒಂದು ಗುಂಟೆ ಕೂಡ ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಯಲ್ಲ, ಎಲ್ಲವೂ ಪಿತ್ರಾರ್ಜಿತ ಆಸ್ತಿಗಳಾಗಿವೆ. ದಾವಾ ಸ್ವತ್ತುಗಳು ಎಲ್ಲವೂ ಪಿತ್ರಾರ್ಜಿತ ಎಂದು ತೋರಿಸಲು ನಾನು ಆರ್.ಟಿ.ಸಿ. ಮತ್ತು ಎಂ.ಆರ್.ಗಳನ್ನು ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿರುವ ನಿಡಿ–1 ರ ಪಹಣಿ ಪತ್ರಿಕೆಯಲ್ಲಿ ಕಾಲಂ ನಂಬರ 9 ಮತ್ತು 10 ರಲ್ಲಿ ನನ್ನ ತಂದೆಯ ಹೆಸರು ಕೆಂಪೆಗೌಡ ಬಿನ್ ಬೊರೇಗೌಡ ಎಂದು ಕಾಣಿಸಿ ಕ್ರಯ ಎಂದು ಕಾಣಿಸಿದ್ದಾರೆ ಎಂದು ಅದು ಸುಳ್ಳು, ನನ್ನ ತಾತನಿಗೆ ಕ್ರಯವಾಗಿತ್ತು, ಈ ನಿಡಿ–1 ರ ಆರ್.ಟಿ.ಸಿ. ಸರಿಯಿಲ್ಲ ಎಂದು ಹೇಳುತ್ತಾರೆ. ನಿಡಿ–1 ರ ಪಹಣಿ ಸರಿಯಿಲ್ಲ ಎಂದು ನಾನು ಅದನ್ನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ.

ನಿಡಿ-2ರ ಪಹಣಿ ಸರ್ವೇ ನಂ. 1/16ರ 7 ಎಕರೆ 26 ಗುಂಟೆ ನನ್ನ ತಂದೆ ಹೆಸರಿಗೆ ಕ್ರಯ ಎಂದು ಕಾಣಿಸಿದ್ದಾರೆ ಎಂದರೆ ಸರಿ, ಅದೂ ಒಟ್ಟು ಕುಟುಂಬದ ಆಸ್ತಿ, ಆದರೆ ನಮ್ಮ ತಂದೆ ಹೆಸರಿಗೆ ಕ್ರಯ ಮಾಡಿಸಿದ್ದರು. ನನ್ನ ಲಿಖಿತ ಹೇಳಿಕೆಯ ಪ್ಯಾರಾ ನಂಬರ 13 ಮತ್ತು ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ ನಂಬರ 11ರಲ್ಲಿ 1986ರಲ್ಲೆ ವಾದಿಗೆ ದಿನಾಂಕ 04.04.1991ರಂದು ಆಗಿದ್ದ ಕುಟುಂಬ ವ್ಯವಸ್ಥಾ ಪತ್ರದ ಅಡಿ ಈ ಹಿಂದೆ ಭಾಗಾಂಶ ಆಗಿತ್ತು, ಆ ನಂತರದಲ್ಲಿ ನನ್ನ ಮತ್ತು 2ನೇ ಪ್ರತಿವಾದಿಗೆ ಬಾಯಿ ಮಾತಿನ ಮೂಲಕ ಹಿಸ್ಸೆ ಮಾಡಿ ಕೊಟ್ಟಿರುವ ಕಾರಣ ಈ ದಾವೆಯು ಉರ್ಜಿತವಲ್ಲ ಎಂದರೆ ಸರಿಯಲ್ಲ. ಅದರ ಪ್ರಕಾರ ಹಿಸ್ಸೆ ಆಗಿಲ್ಲ, ನಾನು ಮತ್ತು ವಾದಿ, 2ನೇ ಪ್ರತಿವಾದಿ ತೊಂದರೆ ಕೊಡುವ ದುರುದ್ದೇಶ ಹೊಂದಿ ಈ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಹೆಸರಿಗೆ ಆಗಿರುವ ದಾವಾ ಸ್ವತ್ತುಗಳ ಮೇಲೆ ನನಗಾಗಲೀ, ವಾದಿಗಾಗಲಿ ಯಾವುದೇ ಹಕ್ಕು ಮತ್ತು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ಜಮೀನು ಹಂಚಿಕೆಯೆ ಆಗಿಲ್ಲ.

<u>ಪಾಟೀ ಸವಾಲುಃ 3ನೇ ಪ್ರತಿವಾದಿ ಹಾಗೂ ವಾದಿ ಪರ ವಕೀಲ**ರಿಂದಃ ಕಾಲಾವಕಾಶ ಕೋರಿದ್ದು, ಮುಂದೂಲಾಯಿತು.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.